**ಕಾರ್ಯದರ್ಶಿ/ಖಜಾಂಚಿಗಳ ಕಛೇರಿ, ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, ಶಿಕ್ಷಕರ ಸದನ,ಕೆಂಪೇಗೌಡ ರಸ್ತೆ, ಬೆಂಗಳೂರು–560 002.**

**ಅತ್ಯಾದ್ಯತೆ**

ಸಂ: ಎಫ್5/ಶಿ.ಕ.ನಿ./ವಿ.ಶಿ.ಪ್ರಶಸ್ತಿ/01.2016–17 ದಿನಾಂಕ:04.02.2016.

**ಸುತ್ತೋಲೆ**

ವಿಷಯ: 2016–17 ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ವತಿಯಿಂದ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರಿಗೆ ನೀಡುವ "ವಿಶೇಷ ಶಿಕ್ಷಕರ ಪ್ರಶಸ್ತಿ" ಗಳಿಗೆ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

----

2016–17ನೇ ಸಾಲಿಗೆ **ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ** ವತಿಯಿಂದ ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ/ಪ್ರೌಢ ಶಾಲಾ ಶಿಕ್ಷಕರಿಗೆ ಈ ಕೆಳಕಂಡ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಆಯ್ಕೆಯಾದ ಶಿಕ್ಷಕರಿಗೆ ರಾಜ್ಯ ಮಟ್ಟದ ಶಿಕ್ಷಕರ ದಿನಾಚರಣೆ ಸಮಾರಂಭದಲ್ಲಿ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುವುದು. ಇದಕ್ಕೆ ಸಂಬಂಧಿಸಿದಂತೆ ಈ ಪತ್ರದೊಂದಿಗೆ ಅರ್ಜಿ ನಮೂನೆ, ಸೂಚನೆಗಳು ಹಾಗೂ ಚೆಕ್‌ಲಿಸ್ಟ್‌ಗಳನ್ನು ಲಗತ್ತಿಸಲಾಗಿದೆ.

| ಕ್ರ.ಸಂ | ಪ್ರಶಸ್ತಿಯ ವಿವರ | ಪ್ರಶಸ್ತಿಗಳ ಸಂಖ್ಯೆ | | |
|---|---|---|---|---|
| | | ಪ್ರಾಥಮಿಕ | ಪ್ರೌಢ | ಒಟ್ಟು |
| 01 | **ರಾಜೀವ್ ಗಾಂಧಿ ಸ್ಮಾರಕ ಅತ್ಯುತ್ತಮ ವಿಜ್ಞಾನ ಶಿಕ್ಷಕ ಪ್ರಶಸ್ತಿ** | 01 | 01 | 02 |
| 02 | **ಉತ್ತಮ ವಿಜ್ಞಾನ ಶಿಕ್ಷಕ ಪ್ರಶಸ್ತಿ"** | 02 | 02 | 04 |
| 03 | **ವಿಶೇಷ ಶಿಕ್ಷಕ ಪ್ರಶಸ್ತಿ (ಸಾಮಾನ್ಯ ಹಾಗೂ ಇತರ ಎಲ್ಲಾ ರೀತಿಯ ಶಿಕ್ಷಕರಿಗೆ)** | 02 | 02 | 04 |
| | **ಒಟ್ಟು** | 05 | 05 | 10 |

ಶಿಕ್ಷಕರಿಂದ ಸ್ವೀಕರಿಸುವ ಅರ್ಜಿ ಮತ್ತು ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ದೃಢೀಕರಿಸಿ, ಪ್ರಸ್ತಾವನೆಯನ್ನು (ಒಂದು ಶೈಕ್ಷಣಿಕ ಬ್ಲಾಕ್‌ನಿಂದ ಗರಿಷ್ಠ ಒಂದು ಪ್ರಶಸ್ತಿಗೆ ಒಂದು ಪ್ರಸ್ಥಾವನೆ ಮಾತ್ರ) ನೇರವಾಗಿ **ಕಾರ್ಯದರ್ಶಿ / ಖಜಾಂಚಿಗಳು, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಶಿಕ್ಷಕರ ಸದನ, ಕೆ. ಜಿ. ರಸ್ತೆ, ಬೆಂಗಳೂರು – 560 002,** ಇಲ್ಲಿಗೆ ತಮ್ಮ ಸ್ಪಷ್ಟ ಶಿಫಾರಸ್ಸಿನೊಂದಿಗೆ **ದಿನಾಂಕ: 30.04.2016** ರೊಳಗೆ ತಲುಪಿಸುವಂತೆ ಸಲ್ಲಿಸಲು ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಿದೆ. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರು ಈ ಬಗ್ಗೆ ನಿಮ್ಮ ವ್ಯಾಪ್ತಿಯಲ್ಲಿ ಹೆಚ್ಚಿನ ಪ್ರಚಾರ ನೀಡಿ ಅರ್ಹ ಶಿಕ್ಷಕರಿಂದ ಪ್ರಸ್ತಾವನೆ ಪಡೆದು ಸಲ್ಲಿಸಲು ತಮ್ಮ ವ್ಯಾಪ್ತಿಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚನೆ ನೀಡಲು ತಿಳಿಸಿದೆ. ಇದನ್ನು ಆದ್ಯತೆಯ ಮೇಲೆ ಪರಿಗಣಿಸಲು ಕೋರಿದೆ. ಅಪೂರ್ಣ ಮಾಹಿತಿಗಳೊಂದಿಗೆ ಹಾಗೂ ತಡವಾಗಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

1/1/2/16

ಆಯುಕ್ತರು, ಸಾ.ಶಿ.ಇ. ಹಾಗೂ ಕಾರ್ಯದರ್ಶಿ/ಖಜಾಂಚಿಗಳು

ಪ್ರತಿಗಳು:

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಸಾ.ಶಿ.ಇ., ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ – ತಮ್ಮ ವ್ಯಾಪ್ತಿಯಲ್ಲಿನ ಶಿಕ್ಷಕರಿಗೆ ಈ ಬಗ್ಗೆ ಮಾಹಿತಿ ನೀಡುವಂತೆ ಸೂಚಿಸಿ ಕಳುಹಿಸಿದೆ.

## ಶಿಕ್ಷಕರ ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ಸೂಚನೆಗಳು:

1. ವಿವಿಧ ಸಾಧನೆಗಳಿಗೆ ಸಂಬಂಧಿಸಿದಂತೆ ವರದಿಯನ್ನು/ದಾಖಲೆಗಳನ್ನು ಚೆಕ್‌ಲಿಸ್ಟ್‌ನಂತೆ ಲಗತ್ತಿಸಿರಬೇಕು.

2. ದಿನಾಂಕ: 31.12.2015ಕ್ಕೆ ಕನಿಷ್ಠ 10 ವರ್ಷಗಳ ಬೋಧನಾ ಅನುಭವವಿರಬೇಕು.ಪ್ರಸ್ತಾವನೆಯನ್ನು ಕಳುಹಿಸಿದ ಅಂತಿಮ ದಿನಾಂಕದೊಳಗೆ ಕಾರ್ಯನಿರ್ವಹಿಸುತ್ತಿದ್ದು ನಂತರ ನಿವೃತ್ತರಾದಲ್ಲಿ ಪರಿಗಣಿಸಬಹುದು.

3. "ರಾಜೀವ್ ಗಾಂಧಿ ಸ್ಮಾರಕ ಅತ್ಯುತ್ತಮ ವಿಜ್ಞಾನ ಶಿಕ್ಷಕ ಪ್ರಶಸ್ತಿ"ಗೆ ಪ್ರಸ್ತಾವನೆ ಸಲ್ಲಿಸುವವರು ವಿಜ್ಞಾನ ವಿಷಯ ಬೋಧನೆಯಲ್ಲಿ ನೂತನ ಪ್ರಯೋಗಗಳನ್ನು ಮಾಡಿರಬೇಕು ಮತ್ತು ವೈಜ್ಞಾನಿಕ ಸಂಶೋಧನೆಯಲ್ಲಿ ತೊಡಗಿದ್ದ ಬಗ್ಗೆ ಸೂಕ್ತ ಮಾಹಿತಿಯನ್ನು ಒದಗಿಸಿರಬೇಕು (ಈ ಪ್ರಶಸ್ತಿಯನ್ನು ವಿಜ್ಞಾನ ಶಿಕ್ಷಕರಿಗೆ ಮಾತ್ರ ನೀಡಲಾಗುವುದು).

4. ಹಿಂದಿನ ವರ್ಷಗಳಲ್ಲಿ ರಾಜ್ಯ / ರಾಷ್ಟ್ರ ಪ್ರಶಸ್ತಿ ಹಾಗೂ "ವಿಶೇಷ ಶಿಕ್ಷಕ ಪ್ರಶಸ್ತಿ" ಪಡೆದ ಶಿಕ್ಷಕರು ಈ ಸಾಲಿನ ಪ್ರಶಸ್ತಿಗೆ ಅರ್ಹರಿರುವುದಿಲ್ಲ.

5. ತರಗತಿಯಲ್ಲಿ ಬೋಧನೆಗಾಗಿ ಹಮ್ಮಿಕೊಂಡಿರುವ ಕಾರ್ಯ ಯೋಜನೆಗಳು, ನೂತನ ಪ್ರಯೋಗಗಳು ಪರಿಣಾಮಕಾರಿಯಾಗಿರಬೇಕು. ಕಲಿಕೆಯಲ್ಲಿ ಮಕ್ಕಳಿಗೆ ವಿಶೇಷ ಪ್ರಭಾವ ಬೀರುವಂತಿರಬೇಕು ( ಚಟುವಟಿಕೆಯ ಪಟ್ಟಿಯನ್ನು ಲಗತ್ತಿಸಿರಬೇಕು).

6. ಅರ್ಜಿಯೊಂದಿಗೆ ಪಾಸ್‌ಪೋರ್ಟ್ ಸೈಜಿನ 02 ಭಾವಚಿತ್ರಗಳನ್ನು ಪ್ರತ್ಯೇಕವಾಗಿ ಲಗತ್ತಿಸಿರಬೇಕು.

7. ಅರ್ಜಿಯನ್ನು ಅ) ರಾಜೀವ್ ಗಾಂಧಿ ಸ್ಮಾರಕ ಅತ್ಯುತ್ತಮ ವಿಜ್ಞಾನ ಶಿಕ್ಷಕ ಪ್ರಶಸ್ತಿ, ಆ) ವೈಜ್ಞಾನಿಕ ಬೋಧನಾ ಕ್ಷೇತ್ರ"ದಲ್ಲಿ ಸೇವೆ ಸಲ್ಲಿಸಿರುವ ಶಿಕ್ಷಕರಿಗೆ ವಿಶೇಷ ಶಿಕ್ಷಕ ಪ್ರಶಸ್ತಿ, ಇ) ಶೈಕ್ಷಣಿಕ ಬೋಧನಾ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಶಿಕ್ಷಕರಿಗೆ ವಿಶೇಷ ಶಿಕ್ಷಕ ಪ್ರಶಸ್ತಿ, ಈ ಮೂರು ಪ್ರಶಸ್ತಿಗಳಲ್ಲಿ ಯಾವುದಾದರು ಒಂದು ಪ್ರಶಸ್ತಿಗೆ ಮಾತ್ರ ಸಲ್ಲಿಸಬೇಕು.

8. ನಿಗದಿ ಪಡಿಸಿದ ಮಾನದಂಡಗಳಿಗೆ ಅನುಗುಣವಾಗಿಲ್ಲದ ಪ್ರಸ್ತಾವನೆಗಳನ್ನು ತಿರಸ್ಕರಿಸಲಾಗುವುದು.

9. ಶಿಕ್ಷಕರು ಯಾವುದೇ ಶಿಸ್ತು ಕ್ರಮಕ್ಕೆ ಒಳಗಾಗಿ ದಂಡನಾ ಅವಧಿಯಲ್ಲಿ ಇದ್ದಲ್ಲಿ, ಅಂತಹ ಶಿಕ್ಷಕರ ಅರ್ಜಿಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ತಿರಸ್ಕರಿಸಬೇಕು.

10. ಅನುದಾನಿತ ಶಾಲಾ ಶಿಕ್ಷಕರ ನೇಮಕಾತಿಯು ಇಲಾಖೆಯಿಂದ ಅನುಮೋದನೆಯಾಗಿದ್ದಲ್ಲಿ ಮಾತ್ರ ಕ್ಷೇತ್ರ ಶಿಕ್ಷಣಾಧಿಕಾರಿಗಳು ದೃಢೀಕರಿಸಬೇಕು.

11. ತಾಲ್ಲೂಕು ಹಂತದಲ್ಲಿ ಒಂದು ಪ್ರಶಸ್ತಿಗೆ ಒಂದಕ್ಕಿಂತ ಹೆಚ್ಚು ಅರ್ಜಿಗಳು ಬಂದಲ್ಲಿ ಅವುಗಳಲ್ಲಿ ಅತ್ಯುತ್ತಮವಾದ ಒಂದು ಪ್ರಸ್ತಾವನೆಯನ್ನು ಮಾತ್ರ ಶಿಫಾರಸ್ಸು ಮಾಡಿ ಕಳುಹಿಸಬೇಕು.

12. ಯಾವುದೇ ಶಿಫಾರಸ್ಸು ಪತ್ರಗಳನ್ನು ಪರಿಗಣಿಸುವುದಿಲ್ಲ. ಆಯ್ಕೆ ಸಮಿತಿ ಸದಸ್ಯರ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ.

13. ಶಿಕ್ಷಕರ ಕಾರ್ಯಕ್ಷೇತ್ರಕ್ಕೆ ಪೂರಕವಾಗಿರುವ ಮಾಹಿತಿ ಹಾಗೂ ಭಾವಚಿತ್ರಗಳನ್ನು ಮಾತ್ರ ಪರಿಗಣಿಸತಕ್ಕದ್ದು.

14. ಒಬ್ಬ ಶಿಕ್ಷಕರಿಗೆ ಪ್ರಾಥಮಿಕ/ಪ್ರೌಢ ಹಂತದ ಒಂದು ಪ್ರಶಸ್ತಿ ಮಾತ್ರ ಸೀಮಿತವಾಗಿರುತ್ತದೆ.

* * * * * * * *

## ಕಾರ್ಯದರ್ಶಿ ಹಾಗೂ ಖಜಾಂಚಿಗಳ ಕಛೇರಿ, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಬೆಂಗಳೂರು-560 002.

("ರಾಜೀವ್ ಗಾಂಧಿ ಸ್ಮಾರಕ ಅತ್ಯುತ್ತಮ ವಿಜ್ಞಾನ ಶಿಕ್ಷಕ ಪ್ರಶಸ್ತಿ, ಶೈಕ್ಷಣಿಕ ಕ್ಷೇತ್ರದಲ್ಲಿ ವಿಶೇಷ ಶಿಕ್ಷಕ ಪ್ರಶಸ್ತಿ ಮತ್ತು ವೈಜ್ಞಾನಿಕ ಕ್ಷೇತ್ರದಲ್ಲಿ ವಿಶೇಷ ಶಿಕ್ಷಕ ಪ್ರಶಸ್ತಿಗಳಿಗೆ )

ಪಾಸ್ ಪೋರ್ಟ್ ಅಳತೆಯ ಭಾವಚಿತ್ರ ಅಂಟಿಸಿ

## ಅರ್ಜಿ ನಮೂನೆ

| ಪ್ರಾಥಮಿಕ | | ಪ್ರೌಢ | |
|---|---|---|---|

| | | |
|---|---|---|
| 1 | ಯಾವ ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸಿದೆ. | |
| 2 | ಶಿಕ್ಷಕರ ಹೆಸರು | |
| 3 | ಹುದ್ದೆ | |
| 4 | ವಿದ್ಯಾರ್ಹತೆ | |
| 5 | ಜನ್ಮ ದಿನಾಂಕ | |
| 6 | ಗಂಡು / ಹೆಣ್ಣು | |
| 7 | ಸೇವೆ ಸಲ್ಲಿಸುತ್ತಿರುವ ಸಂಸ್ಥೆಯ ವಿಳಾಸ. | |
| 8 | ಸೇವೆಗೆ ಸೇರಿದ ದಿನಾಂಕ ಮತ್ತು ಪ್ರಸ್ತುತ ವೃಂದದಲ್ಲಿ ಸಲ್ಲಿಸಿರುವ ಒಟ್ಟು ಸೇವೆ (ದಿನಾಂಕ: 31.12.2015ರ ವರೆಗೆ). | |
| 9 | ಈ ಹಿಂದೆ ಇಲಾಖೆಯಿಂದ ಪಡೆದ ಪ್ರಶಸ್ತಿಗೆಳ ವಿವರ | |

------2

| | | |
|---|---|---|
| 10 | ಸೇವೆ ಸಲ್ಲಿಸುತ್ತಿರುವ ಬಗ್ಗೆ ನಿಯಂತ್ರಣಾಧಿಕಾರಿಗಳಿಂದ ಪಡೆದ ಸೇವಾ ದೃಢೀಕರಣ ಪತ್ರವನ್ನು ಲಗತ್ತಿಸಲಾಗಿದೆಯೆ ? | ಹೌದು / ಇಲ್ಲ |
| 11 | ಶಿಕ್ಷಕರ ಹವ್ಯಾಸಗಳು ( ಪಟ್ಟಿ ಲಗತ್ತಿಸಿರಿ). | |

(ಚೆಕ್ ಲಿಸ್ಟ್‌ನಂತೆ ಪ್ರತ್ಯೇಕವಾಗಿ ದಾಖಲೆ / ಮಾಹಿತಿಗಳನ್ನು ಲಗತ್ತಿಸಬೇಕು.)

ಸ್ಥಳ :
ದಿನಾಂಕ :

ಶಿಕ್ಷಕರ ಸಹಿ

---

ಸಂಸ್ಥೆಯ ಮುಖ್ಯಸ್ಥರ ದೃಢೀಕರಣ

ಶ್ರೀಮತಿ/ಶ್ರೀ______________________________________________________________________

________________________ ಈ ಶಿಕ್ಷಣ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ವಿವರಗಳು ಸರಿಯಾಗಿರುತ್ತವೆಂದು ದೃಢೀಕರಿಸಿದೆ.

ಸ್ಥಳ :
ದಿನಾಂಕ :

ಶಿಕ್ಷಣ ಸಂಸ್ಥೆಯ ಮುಖ್ಯಸ್ಥರ
ಸಹಿ ಮತ್ತು ಮೊಹರು

---

ಕ್ಷೇತ್ರ ಶಿಕ್ಷಣಾಧಿಕಾರಿಗಳ ದೃಢೀಕರಣ:

ಶ್ರೀಮತಿ/ಶ್ರೀ______________________________________________________________________

__ರವರುಸರ್ಕಾರಿ/ಅನುದಾನಿತಶಾಲೆಯಲ್ಲಿ ಖಾಯಂ ಶಿಕ್ಷಕರಾಗಿದ್ದು,__________________________________________

______________________________________________________________________ಶಾಲೆಂ ಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರ ಹುದ್ದೆಯು ಸರ್ಕಾರದಿಂದ ಅನುದಾನಕ್ಕೆ ಒಳಪಟ್ಟಿರುತ್ತದೆ. (ಅನುದಾನಿತ ಶಾಲೆಯ ಶಿಕ್ಷಕರಾಗಿದ್ದಲ್ಲಿ ಮಾತ್ರ). ಇವರು 'ರಾಜೀವ್ ಗಾಂಧಿ ಸ್ಮಾರಕ ಅತ್ಯುತ್ತಮ ವಿಜ್ಞಾನ ಶಿಕ್ಷಕ ಪ್ರಶಸ್ತಿ' / 'ಶೈಕ್ಷಣಿಕ ಕ್ಷೇತ್ರದಲ್ಲಿ ವಿಶೇಷ ಶಿಕ್ಷಕ ಪ್ರಶಸ್ತಿ' / 'ವೈಜ್ಞಾನಿಕ ಕ್ಷೇತ್ರದಲ್ಲಿ ವಿಶೇಷ ಶಿಕ್ಷಕ ಪ್ರಶಸ್ತಿ'ಗಾಗಿ (ಅನ್ವಯಿಸದಿರುವುದನ್ನು ಹೊಡೆದುಹಾಕಿ) ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಮೇಲಿನ ಎಲ್ಲಾ ವಿವರಣೆಗಳು ಸರಿಯಾಗಿವೆ ಎಂದು ದೃಢೀಕರಿಸಿದೆ ಮತ್ತು ಪ್ರಶಸ್ತಿಗಾಗಿ ಶಿಫಾರಸ್ಸು ಮಾಡಿದೆ.

ಸ್ಥಳ :
ದಿನಾಂಕ :

ಕ್ಷೇತ್ರ ಶಿಕ್ಷಣಾಧಿಕಾರಿಗಳ
ಸಹಿ ಮತ್ತು ಮೊಹರು